ಪಠಣ ಕುತೂಹಲ



ಎಂ.ಎಸ್. ಶ್ರೀರಾಮ್

# ತೃಪ್ತಿಯ ಸೌಖ್ಯ

ದುಡಿದು ಸಂಗ್ರಹಿಸಿಟ್ಟುಕೊಳ್ಳುವ ತುರ್ತು ಇಲ್ಲದಿದ್ದರೆ, ಕೀನ್ಸ್ ಹೇಳಿದಂತೆ ನಾವೆಲ್ಲರೂ ವಾರಕ್ಕೆ 15 ಗಂಟೆಗಳ ಕೆಲಸವನ್ನು ಮಾಡಿ, ಮಿಕ್ಕ ಸಮಯದಲ್ಲಿ ವಿರಾಮದ ಬಗ್ಗೆ ಯೋಚಿಸಬಹುದು.

ನಾವು ಸಂತೋಷದಿಂದ, ತೃಪ್ತಿಯಿಂದ ಇದ್ದೇವೆಯೆ ಎನ್ನುವುದು ಸಾಮಾನ್ಯವಾಗಿ ಅಧ್ಯಾತ್ಮದ ಪ್ರಶ್ನೆಯಾಗಿಬಿಡುತ್ತದೆ. ಆದರೆ, 1930ರಲ್ಲಿ ಜಾನ್ ಮೇನಾರ್ಡ್ ಕೀನ್ಸ್ **‘The Economic Possibilities for our Grandchildren’** ಎನ್ನುವ ಪ್ರಬಂಧದಲ್ಲಿ ಅಂದಿನ ದಿನದವರೆಗೆ ಆಗಿದ್ದ ಪ್ರಗತಿ, ತಾಂತ್ರಿಕ ಆವಿಷ್ಕಾರ, ಉತ್ಪಾದಕತೆಯ ಹೆಚ್ಚಳ ಎಲ್ಲವನ್ನೂ ಪರಿಗಣಿಸಿ ಆರ್ಥಿಕ ಸೌಖ್ಯದತ್ತ ನಾವು ಸಾಗುತ್ತಿದ್ದೇವೆ ಎಂದು ವ್ಯಾಖ್ಯಾನಿಸಿದ್ದರು. ನಮ್ಮ ದೈನಂದಿನ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಮನುಷ್ಯನ ವಾರಕ್ಕೆ ಕೇವಲ ಹದಿನೈದು ಗಂಟೆಗಳ ಕಾಲದ ದುಡಿಮೆ ಸಾಕಾಗುವ ಪರಿಸ್ಥಿತಿಯನ್ನು ಆರ್ಥಿಕ ಸೌಖ್ಯವೆಂದು ಅವರು ವ್ಯಾಖ್ಯಾನಿಸಿದ್ದರು. ಆದರೆ, ಮನುಕುಲ ಕೇವಲ ಹದಿನೈದು ಗಂಟೆಗಳ ದುಡಿಮೆಯಿಂದ ತೃಪ್ತರಾಗುವ ಸಾಧ್ಯತೆಯ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸಿದ್ದರು.

ಆರ್ಥಿಕ ಸೌಖ್ಯದ ಜಿಜ್ಞಾಸೆಯ ಹಿನ್ನೆಲೆಯಲ್ಲಿ, ನಮೀಬಿಯಾ ಮತ್ತು ಬೋಟ್ಸ್‌ವಾನಾದ ನಡುವೆ ಇರುವ ಬುಡಕಟ್ಟು ಜನಾಂಗದವರಿಂದ ಕಲಿತ ವಿಚಾರಗಳನ್ನು ಹಾಗೂ ಆ ಸಮಾಜ ಬದಲಾಗುತ್ತಿರುವ ವಿಧಾನವನ್ನು ಮಾನವಶಾಸ್ತ್ರದ ಚೌಕಟ್ಟಿನಲ್ಲಿ ದಾಖಲಿಸಿರುವ ಜೇಮ್ಸ್ ಸುಜ್‌ಮನ್ ಅವರ **‘Affluence without Abundance’** (ಬ್ಲೂಮ್ಸ್‌ಬರಿ ಪ್ರಕಾಶನ) ಪುಸ್ತಕವನ್ನು ಗಮನಿಸಬೇಕು. ಇದೇ ವಾದವನ್ನು ನ್ಯೂರಿಟ್ ಬರ್ಡ್ ಡೇವಿಡ್ ಅವರು ಕೂಡ, ನಮ್ಮ ನೀಲಗಿರಿ ಪ್ರಾಂತದಲ್ಲಿರುವ ನಾಯಕ ಬುಡಕಟ್ಟು ಜನಾಂಗದವರ ಬಗೆಗೂ ಬರೆಯುತ್ತಾರೆ. ಒಂದು ಜನಾಂಗ ಕೇವಲ ಬೇಟೆ ಮತ್ತು ಆಹಾರ ಸಂಗ್ರಹದ **(hunting and gathering)** ಮೇಲೆ ನಿಂತಿದ್ದರೆ ಮಾಡಬೇಕಾದ ಕೆಲಸ ಮತ್ತು ಅಲ್ಲಿರುವ ಸಾಮಾಜಿಕ ಚೌಕಟ್ಟಿಗೂ, ಕೃಷಿ ಕೈಗೊಳ್ಳುವ ಜನಾಂಗದವರ ಜೀವನದ ಚೌಕಟ್ಟಿಗೂ, ಹಾಗೂ ಆಧುನಿಕ ಜಗತ್ತಿನಲ್ಲಿ ನೌಕರಿ ಮಾಡುತ್ತಿರುವ ಸಮಾಜದ ಚೌಕಟ್ಟಿಗೂ ಇರುವ ಸ್ಥೂಲ ವ್ಯತ್ಯಾಸಗಳನ್ನು ನಾವು ಈ ಅಧ್ಯಯನಗಳ ಬುನಾದಿಯ ಮೇಲೆ ಕಂಡುಕೊಳ್ಳಬಹುದು. ಇಲ್ಲಿ ನಮ್ಮನ್ನು ನಾವು ಕೇಳಿಕೊಳ್ಳಬೇಕಾದ ಮೂಲಭೂತ ಪ್ರಶ್ನೆ – ತೃಪ್ತಿ, ಮತ್ತು ಅದರಿಂದ ಉಂಟಾಗುವ ಸೌಖ್ಯವನ್ನು ಹೇಗೆ ಕಾಣುತ್ತೇವೆ ಎನ್ನುವುದೇ.

ಮಹಾತ್ಮ ಗಾಂಧಿಯವರ ಈ ಮಾತು ಗಮನಿಸಿ: **‘Earth provides enough to satisfy**